# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 142 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತವು (Karnataka Tourism Infrastrucutre Limited) 2015ನೇ ಸಾಲಿನಲ್ಲಿ ಯಾವ ಉದ್ದೇಶಕ್ಕಾಗಿ ಸ್ಥಾಪಿತವಾಯಿತು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತವು (ಕೆ.ಟಿ.ಐ.ಎಲ್.) ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ ಉತ್ತೇಜನಗೊಳಿಸಲು ಸ್ಥಾಪಿತವಾಯಿತು. |
| ಆ) | ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತದ ಮುಖ್ಯ ಉದ್ದೇಶಗಳು ಮತ್ತು ಗುರಿಗಳೇನು; | ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮವನ್ನು ವಿಹಾರಯಾನ ಪ್ರವಾಸೋದ್ಯಮ, ಸಮುದ್ರ ವಿಮಾನ ಯೋಜನೆಗಳು, ಸಮುದ್ರ ನೌಕಯಾನ ಉದ್ಯಾನವನಗಳು, ವಿಷಯಾಧಾರಿತ ಉದ್ಯಾನವನಗಳು, ಇತ್ಯಾಧಿ ಪ್ರಾರಂಭಿಕ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಖಾಸಗಿ ವಲಯದ ಜೊತೆಯಲ್ಲಿ ಪ್ರವಾಸೋದ್ಯಮ ವಲಯಕ್ಕೆ ಚಾಲನಾಶಕ್ತಿಯನ್ನು ಒದಗಿಸುವ ಉದ್ದೇಶದಿಂದ ಮತ್ತು ಎಲ್ಲಾ ವರ್ಗದ ಪ್ರವಾಸಿಗರಿಗೆ ಮತ್ತು ಯಾತ್ರಿಕರಿಗೆ ವಸತಿ ಸೌಕರ್ಯದ ಅನುಕೂಲತೆಗಳನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ. |
| ಇ) | ಏಳು ವರ್ಷಗಳಿಂದ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತವು ಯಾವ ಯಾವ ಕಾಮಗಾರಿಗಳನ್ನು ನೇರವಾಗಿ ಕೈಗೊಂಡಿದೆ; ಒಂದು ವೇಳೆ ಬೇರೆ ಸಂಸ್ಥೆಗೆ ಗುತ್ತಿಗೆ ಕೊಟ್ಟಿದ್ದರೆ ಈ ಸಂಸ್ಥೆಯ ಉದ್ದೇಶವೇನು: | ಏಳು ವರ್ಷಗಳಿಂದ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತವು ನೇರವಾಗಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಈ ಹಿಂದೆ ನಿಗಮದಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಇದ್ದುದರಿಂದ ಬೇರೆ ಸಂಸ್ಥೆಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ನಿಗಮದಲ್ಲಿ ಸಿಬ್ಬಂದಿಗಳು ಪೂರ್ಣವಾಗಿರುವ ಕಾರಣ, ಎಲ್ಲಾ ಕಾಮಗಾರಿಗಳನ್ನು ಕೆ.ಟಿ.ಐ.ಎಲ್. ಮೂಲಕವೇ ಕೈಗೊಳ್ಳಲಾಗುತ್ತಿದೆ. |
| ಈ) | ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತದ ಸಿಬ್ಬಂದಿಗಳು ನೇರವಾಗಿ ನೇಮಕಾತಿ ಹೊಂದಿದ್ದಾರೆಯೇ ಅಥವಾ ಅನ್ಯ ಸಂಸ್ಥೆಗಳಿಂದ ಎರವಲು ಸೇವೆಗಳ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ; ಸಿಬ್ಬಂದಿಗಳ ಮಾಸಿಕ ವೇತನ ಮತ್ತು ಇತರೆ ಭತ್ಯೆಗಳನ್ನು ಯಾವ ರೀತಿ , ವಿಲೇವಾರಿ ಮಾಡಲಾಗುತ್ತದೆ? | ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತದಲ್ಲಿ ಗುತ್ತಿಗೆ ಆಧಾರದ ಮೇಲೆ 3 ಸಹಾಯಕ ಇಂಜಿನಿಯರ್, ಹೊರಗುತ್ತಿಗೆ ಆಧಾರದ ಮೇಲೆ 10 ಸಹಾಯಕ ಇಂಜಿನಿಯರ್ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ 1 ದ್ವಿ.ದ.ಸ ಮತ್ತು 1 ಪ್ಯೂನ್ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಸಿಬ್ಬಂದಿಗಳ ಮಾಸಿಕ ವೇತನ ಮತ್ತು ಇತರ ಭತ್ಯೆಗಳನ್ನು ಸಂಬಂಧಪಟ್ಟ ಖಾತೆಗೆ ಜಮ ಮಾಡಲಾಗುತ್ತಿದೆ. |

TOR 307 TDV 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು

ಅನುಬಂಧ

# ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದ ವತಿಯಿಂದ ನೇರವಾಗಿ ಕೈಗೊಂಡಿರುವ ಕಾಮಗಾರಿಗಳು

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿಭಾಗ | ಕಾಮಗಾರಿಯ ಹೆಸರು | ವರ್ಷ | ಅಂದಾಜು ಮೊತ್ತ | ಷರಾ |
|---|---|---|---|---|---|
| 1 | ಮೈಸೂರು | ಮೈಸೂರು ತಾಲ್ಲೂಕು ಕೂರ್ಗಳ್ಳಿ ಗ್ರಾಮದ ಶ್ರೀ ಬಿಲ್ಲೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 2019-20 | 100.00 | ಪ್ರಗತಿಯಲ್ಲಿದೆ |
| 2 | ಮೈಸೂರು | ಮೈಸೂರು ತಾಲ್ಲೂಕು ಮಂಡನಹಳ್ಳಿ ಗ್ರಾಮದ ಮಹದೇಶ್ವರ ದೇವಸ್ಥಾನ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 2019-20 | 100.00 | ನಿವೇಶನ ಸಮಸ್ಯೆಯಿಂದ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. |
| 3 | ಮೈಸೂರು | ಮೈಸೂರು ತಾಲ್ಲೂಕು ಬೋಗಾದಿ ಗ್ರಾಮದ ಬಸವೇಶ್ವರ ದೇವಸ್ಥಾನ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 2019-20 | 50.00 | ಪ್ರಗತಿಯಲ್ಲಿದೆ |
| 4 | ಮೈಸೂರು | ಮೈಸೂರು ತಾಲ್ಲೂಕು ಹಿನ್ನೀರಿನ ಮೀನಾಕ್ಷಿ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ | 2019-20 | 50.00 | ನಿವೇಶನ ಸಮಸ್ಯೆಯಿಂದ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. |
| 5 | ಮೈಸೂರು | ಆದಿ ಚುಂಚನಗಿರಿ ಶ್ರೀಕ್ಷೇತ್ರಕ್ಕೆ ಬರುವ ಭಕ್ತಾಧಿಗಳಿಗೆ ಅನುಕೂಲವಾಗಲು ಡಾರ್ಮಿಟರಿ, ಅಡುಗೆ ಮನೆ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ. | 2019-20 | 200.00 | ಪ್ರಗತಿಯಲ್ಲಿದೆ |
| 6 | ಮೈಸೂರು | ಬೇಲೂರು ತಾಲ್ಲೂಕಿನ ಹಳೇಬಿಡು ಗ್ರಾಮದ ಹೊಯ್ಸಳೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ಅಭಿವೃದ್ಧಿ ಕಾಮಗಾರಿ | 2019-20 | 100.00 | ನಿವೇಶನ ಸಮಸ್ಯೆಯಿಂದ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. |
| 7 | ಮೈಸೂರು | ಚಿಕ್ಕಮಗಳೂರು ಹೃದಯ ಭಾಗದಲ್ಲಿರುವ ಬಸವನಹಳ್ಳಿ ಕೆರೆಯನ್ನು ಅಭಿವೃದ್ಧಿ ಪಡಿಸಿ ಪ್ರವಾಸಿ ತಾಣವನ್ನಾಗಿಸುವ ಬಗ್ಗೆ. | 2019-20 | 3600.00 | ಪ್ರಗತಿಯಲ್ಲಿದೆ |

| | | | | | |
|---|---|---|---|---|---|
| 8 | ಮೈಸೂರು | ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ರೂ.15.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ | 2020–21 | 1500.00 | ತಾಂತ್ರಿಕ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. |
| 9 | ಮೈಸೂರು | ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿರುವ ಬೈಲುಕುಪ್ಪೆ ಟಿಬೆಟಿಯನ್ ಸೆಟಲ್‌ಮೆಂಟ್ ಪ್ರದೇಶದಲ್ಲಿ ರೂ.140.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿವಿಧ ಕಾಮಾಗಾರಿ. | 2022–23 | 140.00 | ಪ್ರಗತಿಯಲ್ಲಿದೆ |
| 10 | ರಾಜ್ಯಾದ್ಯಂತ | ಕರ್ನಾಟಕ ರಾಜ್ಯಾದ್ಯಂತ ಪ್ರವಾಸೀಗರ ಅನುಕೂಲಕ್ಕಾಗಿ ಮತ್ತು ಮಾಹಿತಿಗಾಗಿ, ಮಾಹಿತಿ ಫಲಕಗಳನ್ನು ಅಳವಡಿಸುವ ಬಗ್ಗೆ. | 2020–21 | 975.00 | ಪ್ರಗತಿಯಲ್ಲಿದೆ |
| 11 | ಮೈಸೂರು | SIHMs ಫುಡ್ ಕ್ರಾಫ್ಟ್ ಇನ್ಸಿಟ್ಯೂಟ್ ಮೈಸೂರು ಕಾಮಗಾರಿಗೆ ಸಮಗ್ರ ಯೋಜನೆ ವರದಿಯನ್ನು ಪಡೆಯುವ ಬಗ್ಗೆ | 2020–21 | 67.00 | ಪ್ರಗತಿಯಲ್ಲಿದೆ |
| 12 | ಮೈಸೂರು | ಉಡುಪಿಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲ ತೀರದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗೆ ಸಮಗ್ರ ಯೋಜನೆ ವರದಿಯನ್ನು ಸಲ್ಲಿಸುವ ಬಗ್ಗೆ. | 2020–21 | 995.50 | ತಾಂತ್ರಿಕ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. |
| 13 | ಮೈಸೂರು | ಮಂಡ್ಯ ಜಿಲ್ಲೆಯ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಇಲ್ಲಿ ಯಾತ್ರಿನಿವಾಸ ಮುಂದುವರೆದು ಕಾಮಗಾರಿ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ. | 2020–21 | 300.00 | ಪ್ರಗತಿಯಲ್ಲಿದೆ |
| 14 | ಮೈಸೂರು | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ತುರಗನೂರು ಗ್ರಾಮದಲ್ಲಿರುವ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ರಾಜಗೋಪುರದ ನಿರ್ಮಾಣ ಕಾಮಗಾರಿ | 2022–23 | 100.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| 15 | ಮೈಸೂರು | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಬಿ.ಬೆಟ್ಟಹಳ್ಳಿ ಗ್ರಾಮದಲ್ಲಿರುವ ಶ್ರೀ ವಡ್ಗಲ್ ರಂಗನಾಥಸ್ವಾಮಿ ರಾಜಗೋಪುರ ನಿರ್ಮಾಣ ಕಾಮಗಾರಿಗಳಿಗೆ ಕಾಮಗಾರಿ | 2022–23 | 100.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| 16 | ಬೆಂಗಳೂರು | ಕುಣಿಗಲ್ ತಾಲ್ಲೂಕು, "ಎ" ಹೊಸಹಳ್ಳಿ ಶ್ರೀ ಗುಡ್ಡದ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಮೂಲಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ. | 2019–20 | 50.00 | ಪ್ರಗತಿಯಲ್ಲಿದೆ |
| 17 | ಬೆಂಗಳೂರು | ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಅಡಿ ಬೆಂಗಳೂರಿನ ಕಸ್ತೂರ ಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ಕಟ್ಟಡದ ಸಂರಕ್ಷಣೆ ಮತ್ತು ನವೀಕರಣ ಕಾಮಗಾರಿ | 2019–20 | 830.00 | ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ. |

| | | | | | |
|---|---|---|---|---|---|
| 18 | ಬೆಂಗಳೂರು | ನಬಾರ್ಡ್ ಆರ್.ಐ.ಡಿ.ಎಫ್ ಟ್ರ್ಯಾಂಚ್-28 ರಾಡಿಯಲ್ಲಿ 2022-23 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆ,ದೇವರಹಳ್ಳಿಯಿಂದ ಹಳೆ ಚನ್ನಗಿರಿಗೆ ಹೋಗುವ ರಸ್ತೆ (ಶ್ರೀ ರಂಗನಾಥಸ್ವಾಮಿ ದೇವಾಲಯ ರಸ್ತೆ) ಹಾಗೂ ಹಿರೇ ಗಂಗೂರು ರಾಮೇನಹಳ್ಳಿ ರಸ್ತೆಯಿಂದ ಯರಗಟ್ಟಿಹಳ್ಳಿ ಕಡೆಗೆ ಹೋಗುವ ರಸ್ತೆ (ಶ್ರೀ ಮಲ್ಲೇಶ್ವರ ದೇವಾಲಯ ರಸ್ತೆ) ಅಭಿವೃದ್ಧಿ. | 2022-23 | 100.00 | ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ. |
| 19 | ಬೆಂಗಳೂರು | ನಬಾರ್ಡ್ ಆರ್.ಐ.ಡಿ.ಎಫ್ ಟ್ರ್ಯಾಂಚ್-28 ರಾಡಿಯಲ್ಲಿ 2022-23 ನೇ ಸಾಲಿನಲ್ಲಿ ತುಮಕೂರು ಜಿಲ್ಲೆ,ತುಮಕೂರು ತಾಲೂಕು ಬೊಮ್ಮನಹಳ್ಳಿ ರಸ್ತೆಯಿಂದ ಶಿವಗಂಗೆ ರಸ್ತೆ ಸುಧಾರಣೆ. | 2022-23 | 100.00 | ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ. |
| 20 | ಕಲಬುರಗಿ | ಬೀದರ್‌ನ ಶಿವನಗರದಲ್ಲಿರುವ ರಾಮಕೃಷ್ಣ-ವಿವೇಕಾನಮದ ಆಶ್ರಮದ ಬಳಿ ಕುಡಿಯುವ ನೀರು, ಸ್ನಾನಗೃಹ, ಶೌಚಾಲಯಗಳು, ಪಾತ್ ವೇ ಮುಂತಾದ ಮೂಲಭೂತ ಸೌಕರ್ಯ. | 2021-22 | 50.00 | ಕಾಮಗಾರಿ ಪ್ರಗತಿಯಲ್ಲಿದೆ. |
| 21 | ಕಲಬುರಗಿ | ಸಂಗನಕಲ್ಲಿನಲ್ಲಿ ನವಶಿಲಾಯುಗ, ಕಬ್ಬಿಣ ಯುಗದ ವಸಾಹತು ಸ್ಥಳದ ಮನ:ಸ್ಥಾಪನೆ ಮತ್ತು ಸಂರಕ್ಷಣೆಗಾಗಿ ಹಾಗೂ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಮರಾತತ್ವ ವಸ್ತು ಸಂಗ್ರಹಾಲಯವನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 2021-22 | 296.75 | ಟೆಂಡರ್ ಪ್ರಕಟಿಸಲಾಗಿದ್ದು, ಶೀಘ್ರವೇ ಗುತ್ತಿಗೆದಾರರನ್ನು ಆಯ್ಕೆ ಮಾಡಿ ಕಾಮಗಾರಿ ಪ್ರಾರಂಭಿಸಲಾಗುವುದು. |
| 22 | ಕಲಬುರಗಿ | ಶ್ರೀ ಆಂಜನೇಯ ಸ್ವಾಮಿಯ ಜನ್ಮಸ್ಥಳವೆಂದು ಪ್ರಸಿದ್ಧವಾದ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಯೋಜನಾ ಅನುಷ್ಠಾನ ಸಮಾಲೋಚಕರನ್ನು ನೇಮಿಸುವ ಕುರಿತು. | 2022-23 | 10000.00 | ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ವಿಸ್ತೃತ ಯೋಜನಾ ವರದಿ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 23 | ಕಲಬುರಗಿ | ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಶಿವಶರಣೆ ನಲ್ಲೂರು ನಿಂಬೆಕ್ಕ ರವರ ಜನ್ಮಸ್ಥಳದಲ್ಲಿ ಪ್ರವಾಸಿ ಮೂಲಸೌಲಭ್ಯ ಕಾಮಗಾರಿ. | 2022-23 | 100.00 | ಮೂಲಭೂತ ಸೌಲಭ್ಯ ಕಾಮಗಾರಿಗಳ ಬದಲಾಗಿ ಡಾರ್ಮಿಟರಿ ನಿರ್ಮಿಸುವಂತೆ ದೇವಸ್ಥಾನದ ಆಡಳಿತ ಮಂಡಳಿ ಕೋರಿರುತ್ತಾರೆ. ಅನುಮೋದನೆ ನಿರೀಕ್ಷಿಸಲಾಗಿದೆ. |

| | | | | | |
|---|---|---|---|---|---|
| 24 | ಕಲಬುರಗಿ | ಶ್ರೀ ಮಡಿವಾಳ ಮಾಚಿದೇವ ಮೂಲಸ್ಥಾನ ದೇವರಹಿಪ್ಪರಗಿಯಲ್ಲಿ ಮಾಚಿದೇವರ ಎಲ್ಲಾ ಕುರುಹುಗಳನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕ ಯಾತ್ರಾ ಸ್ಥಳಗಳನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿ. | 2022–23 | 100.00 | ದೇವಸ್ಥಾನದ ಆಡಳಿತ ಮಂಡಳಿ ನಿವೇಶನ ಹಸ್ತಾಂತರಿಸಲು ನಿರಾಕರಿಸಿದ್ದರಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ. |
| 25 | ಕಲಬುರಗಿ | ಕಲಬುರಗಿ ಜಿಲ್ಲೆಯ ಸೇಡಂ ರಸ್ತೆಯಲ್ಲಿರುವ ಕುಸುನೂರು ಗ್ರಾಮದ ವ್ಯಾಪ್ತಿಯಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಮೀನಿನಲ್ಲಿ ಕಲಾವನವನ್ನು ನಿರ್ಮಿಸುವ ಕಾಮಗಾರಿ. | 2021–22 | 2563.00 | ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. |
| 26 | ಬೆಳಗಾವಿ | ಬೆಳಗಾವಿ ಜಿಲ್ಲೆಯ ರಾಜಹಂಸಘಡ ಕೋಟೆ ಪ್ರದೇಶದಲ್ಲಿ ವಿವಿಧ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ. | 2021–22 | 300.00 | ಕಾಮಗಾರಿ ಪ್ರಗತಿಯಲ್ಲಿದೆ. |
| 27 | ಬೆಳಗಾವಿ | ಗದಗ ಜಿಲ್ಲೆ ಲಕ್ಕುಂಡಿಯಲ್ಲಿ ಸಮಗ್ರವಾಗಿ ಪ್ರವಾಸಿ ಸೌಲಭ್ಯವನ್ನು ಅಭಿವೃದ್ಧಿಪಡಿಸಲು (ಕಲ್ಚರ್ ಗ್ಯಾಲರಿ & ಇಂಟರ್ ಪ್ರಿಟೇಷನ್ ಸೆಂಟರ್, ಮುಸಕಿನಭಾವಿ ರಸ್ತೆ ಅಭಿವೃದ್ಧಿ, ಪ್ರವಾಸೋದ್ಯಮ ಕಟ್ಟಡದ ನವೀಕರಣ, ಕೋಟೆ ಗೋಡೆ ಸಂರಕ್ಷಣೆ, ಮಾಹಿತಿ ಫಲಕಗಳು, ವಿದ್ಯುತ್ ವಾಹನಗಳು). | 2021–22 | 285.00 | ಕಾಮಗಾರಿ ಪ್ರಗತಿಯಲ್ಲಿದೆ. |

Managing Director
Karnataka Tourism Infrastructure Limited
Bengaluru - 560 001.